# `ದೂರದೃಷ್ಟಿ ಯೋಜನೆ – ಶಿಕ್ಷಣ

ಶಿಕ್ಷಣ ಎಂಬುವುದು ಪ್ರತಿಯೊಂದು ರಾಷ್ಟ್ರದ ಅಭಿವೃದ್ಧಿಗೆ ಪೂರಕವಾದ ಅಂಶ. ಪ್ರಸ್ತುತ ಜಾಗತಿಕ ಮಟ್ಟದಲ್ಲಿ ಸುಸ್ಥಿರ ಅಭಿವೃದ್ಧಿಯು ಗಂಭೀರವಾಗಿ ಚರ್ಚಿಸುತ್ತಿರುವ ವಿಷಯವಾಗಿದೆ. ಸುಸ್ಥಿರ ಬೆಳವಣಿಗೆ ಕಾರ್ಯಸೂಚಿ-2030 (Agenda for Sustainable Development) ಇದರ ಗುರಿ 4 ರಲ್ಲಿ (ಎಸ್‌ಡಿಜಿ 4) ಪ್ರಸ್ತಾಪಿಸಲಾಗಿರುವ ಜಾಗತಿಕ ಶಿಕ್ಷಣ ಬೆಳವಣಿಗೆ ಕಾರ್ಯಸೂಚಿಯನ್ನು ಭಾರತ 2015 ರಲ್ಲಿ ಅಳವಡಿಸಿಕೊಂಡಿದ್ದು, ಇದು 2030ರ ವೇಳೆಗೆ ಪ್ರತಿಯೊಬ್ಬರಿಗೂ ಸಮಾನ ವಿಸ್ತ್ವವಾದ ಮತ್ತು ಸಮಾನವಾದ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಒದಗಿಸುವ ಹಾಗೂ ಜೀವನಪರ್ಯಂತ ಕಲಿಕೆಯ ಸದಾವಕಾಶಗಳನ್ನು ಖಾತರಿಯಾಗಿ ಒದಗಿಸಿಕೊಡುವ ಉದ್ದೇಶವನ್ನು ಹೊಂದಿದೆ.

ಒಂದು ದೇಶದ ಸಮಗ್ರ ಅಭಿವೃದ್ಧಿಯಲ್ಲಿ ಶಿಕ್ಷಣದ ಪಾತ್ರ ಅತ್ಯುನ್ನತವಾದುದು ಎಂಬುದು ಅಭಿವೃದ್ಧಿ ಹೊಂದಿದ ದೇಶಗಳ ಇತಿಹಾಸದಿಂದ ಈಗಾಗಲೇ ಸಾಬೀತಾಗಿದೆ. ಜಪಾನ್ ದೇಶದ ವಸಾಹತುಶಾಹಿಗೆ ಒಳಪಟ್ಟಿದ್ದ ದಕ್ಷಿಣ ಕೊರಿಯಾ ದೇಶ ತನ್ನ ಸ್ವಾತಂತ್ರ್ಯವನ್ನು ಮರಳಿ ಪಡೆದದ್ದು 1945ರಲ್ಲಿ. ಸಂಪತ್ತಿನ ಲೂಟಿಯಿಂದಾಗಿ ಹಾಗೂ ನೈಸರ್ಗಿಕ ಸಂಪನ್ಮೂಲಗಳ ಅಲಭ್ಯತೆಯಿಂದಾಗಿ ಕಡುಬಡವ ರಾಷ್ಟ್ರಗಳಲ್ಲಿ ಒಂದಾಗಿ ತನ್ನ ಸ್ವಾತಂತ್ರ್ಯೋತ್ತರ ಇತಿಹಾಸವನ್ನು ಆರಂಭಿಸಿದ ದಕ್ಷಿಣ ಕೊರಿಯಾ ಇಂದು ಅಭಿವೃದ್ಧಿ ಹೊಂದಿದ ದೇಶಗಳ ಸಾಲಿನಲ್ಲಿ ನಿಂತಿದೆ.

ಇದು ಸಾಧ್ಯವಾದುದು ಶಿಕ್ಷಣದೆಡೆಗೆ ಆ ದೇಶದ ಜನರಿಗಿದ್ದ ಆಸಕ್ತಿ ಹಾಗೂ ಶಿಕ್ಷಣಕ್ಕೆ ಆ ದೇಶ ನೀಡಿದ ಆದ್ಯತೆಯಿಂದಾಗಿ. ತನ್ನ ದೇಶದ ಪ್ರತಿಯೊಬ್ಬಪ್ರಜೆಯೂ ಸುಶಿಕ್ಷಿತನಾ/ಳಾಗಬೇಕು ಎಂಬ ಗುರಿಯೊಂದಿಗೆ ಉತ್ತಮ ಮಟ್ಟದ ಉಚಿತ ಶಿಕ್ಷಣವನ್ನು ತನ್ನ ಮುಖ್ಯ ಗುರಿಯಾಗಿಸಿಕೊಂಡ ದಕ್ಷಿಣ ಕೊರಿಯಾ ಆರಂಭದಲ್ಲಿ ಪ್ರಾಥಮಿಕ ಶಿಕ್ಷಣ, ಅನಂತರ ಮಾಧ್ಯಮಿಕ ಶಿಕ್ಷಣ, ತದನಂತರ ಪ್ರೌಢಶಿಕ್ಷಣ ಹೀಗೆ ಉಚಿತ ಕಡ್ಡಾಯ ಶಿಕ್ಷಣದ ತನ್ನ ಗುರಿಗಳನ್ನು ವಿಸ್ತರಿಸುತ್ತಲೇ ಸಾಗಿತು. ಶಿಕ್ಷಣದ ಅಸ್ತ್ರದಿಂದಲೇ ಇಂದು ಆರ್ಥಿಕ ಪ್ರಾಬಲ್ಯವನ್ನು ಸಾಧಿಸಿ,ಮುಂದುವರಿದ ರಾಷ್ಟ್ರಗಳ ಸಾಲಿನಲ್ಲಿ ದಕ್ಷಿಣ ಕೊರಿಯಾ ಸ್ಥಾನ ಪಡೆದಿದೆ.

ನಮ್ಮ ದೇಶದ ಉದಾಹರಣೆಯನ್ನೇ ನೋಡುವುದಾದಲ್ಲಿ ಪುಟ್ಟ ಹಾಗೂ ಅತಿಹೆಚ್ಚು ಗ್ರಾಮಾಂತರ ಪ್ರದೇಶವನ್ನು ಹೊಂದಿರುವಕೇರಳ 1991ರಲ್ಲಿ ಶೇಕಡಾ 90 ಸಾಕ್ಷರತೆಯನ್ನು ಸಾಧಿಸುವ ಮೂಲಕ ಭಾರತದ ಪ್ರಥಮ ಸಂಪೂರ್ಣ ಸಾಕ್ಷರತಾ ರಾಜ್ಯವಾಗಿ ಘೋಷಿಸಲ್ಪಟ್ಟ ಉದಾಹರಣೆ ನಮ್ಮ ನೆರೆಯಲ್ಲೇ ಇದೆ. ಅಲ್ಲಿಗೆ ವಿರಮಿಸದೆ 2014ರಲ್ಲಿ ಕೇರಳ ರಾಜ್ಯ ಶಿಕ್ಷಣ ಅಭಿಯಾನದಡಿ ಅತುಲ್ಯಂ ಎಂಬ ವಿಶೇಷ ಯೋಜನೆಯನ್ನು ರೂಪಿಸಿ, ಶಿಕ್ಷಣ ಇಲಾಖೆ ಹಾಗೂ ಗ್ರಾಮ ಪಂಚಾಯತಿಗಳ ಸಕ್ರಿಯ ತೊಡಗಿಸುವಿಕೆಯ ಮೂಲಕ ಸಂಪೂರ್ಣ ಪ್ರಾಥಮಿಕ ಶಿಕ್ಷಣವನ್ನು ಸಾಧಿಸುವತ್ತ ಕೇರಳ ಲಕ್ಷ್ಯ ಹರಿಸಿ, 19 ಏಪ್ರಿಲ್ 2016ರಂದು ದೇಶದ ಉಪರಾಷ್ಟ್ರಪತಿ ಶ್ರೀ ಹಮೀದ್ ಅನ್ಸಾರಿ ಅವರು ಕೇರಳವನ್ನು ಸಂಪೂರ್ಣ ಪ್ರಾಥಮಿಕ ಶಿಕ್ಷಣವನ್ನು ಸಾಧಿಸಿದ ಪ್ರಥಮ ರಾಜ್ಯ ಎಂಬುದಾಗಿ ಘೋಷಿಸಿದರು.

ಕೇರಳ ನಮಗೊಂದು ಮಾದರಿಯಾದರೂ ನಮ್ಮ ದೇಶದ ವಿವಿಧ ಪ್ರಾಂತ್ಯಗಳ ಸವಾಲುಗಳು, ಸಮಸ್ಯೆಗಳು ವಿವಿಧ ಮಾದರಿಯದ್ದಾಗಿವೆ. ಆದರೆ ಕೇರಳದ ಸಾಧನೆಯ ಹಿಂದಿನ ನೈಜಶಕ್ತಿಗಳಾದ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳ ಬದ್ಧತೆ ಹಾಗೂ ಜನಸಮುದಾಯದ ಮನೋಭಾವಗಳೇ ಯಾವ ರಾಜ್ಯ, ಯಾವ ಪ್ರಾಂತ್ಯದಲ್ಲೂ ಕಡ್ಡಾಯ ಶಿಕ್ಷಣದ ಗುರಿ ಸಾಧಿಸಲು ಬಹುಮುಖ್ಯ ಸಾಧನಗಳಾಗಬಲ್ಲವು ಎಂಬುದು ನಿಸ್ಸಂಶಯ.

ಈಗ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಯಲ್ಲಿದೆ, ಶಿಕ್ಷಣ ಕೇವಲ ಪಠ್ಯ ಪುಸ್ತಕಕ್ಕೆ ಮಾತ್ರ ಸೀಮಿತವಾಗಿರದೆ ಪಠ್ಯೇತರ ಚಟುವಟಿಕೆ, ತಾರ್ಕಿಕ ವಿಮರ್ಶೆ, ಸೃಜನಾತ್ಮಕ ಕಲಿಕೆಗೆ ಪ್ರೋತ್ಸಾಹ ಕಲ್ಪಿಸಲಾಗಿದೆ. ಪ್ರತಿ ಒಂದು ಮಗುವೂ ಶಿಕ್ಷಣ ಪಡೆಯಲು ಶಾಲೆಗೆ ಹಾಜರಾಗುವುದು, ಕನಿಷ್ಠ ಕಲಿಕಾಮಟ್ಟವನ್ನು ಸಾಧಿಸುವುದು, ಶಿಕ್ಷಕರ ಜೊತೆಗೆ ಪ್ರಾಥಮಿಕ ಶಿಕ್ಷಣವನ್ನು ಉತ್ತೇಜಿಸಲು ಸಮುದಾಯವನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳುವುದು. ಹಾಗೂ ಕಡ್ಡಾಯ ಶಿಕ್ಷಣ ಕಾಯ್ದೆಯನ್ವಯ ಉಚಿತ ಕಡ್ಡಾಯ ಹಾಗೂ ಗುಣಮಟ್ಟದ ಶಿಕ್ಷಣವನ್ನು ಒದಗಿಸಲು ಅಗತ್ಯವಿರುವ ಮೂಲಭೂತ ಸೌಲಭ್ಯಗಳು ಹಾಗೂ ಮಾನವ ಸಂಪನ್ಮೂಲಗಳನ್ನು ಒದಗಿಸಬೇಕಾಗಿದೆ, ಮಗುವಿನ ಸರ್ವತೋಮುಖ ಬೆಳವಣಿಗೆ ಸಾಧಿಸಲು ಶಿಕ್ಷಣವನ್ನು ಸಾಧನವನ್ನಾಗಿ ರೂಪಿಸುವುದು, ಕಲಿಕಾ ಪ್ರಕ್ರಿಯೆಯನ್ನು ಸ್ಥಳೀಯವಾಗಿ ಶಿಶು ಕೇಂದ್ರಿತ ಚಟುವಟಿಕಾಧಾರಿತ ಹಾಗೂ ಸಂತಸದಾಯಕವಾಗಿರುವಂತೆ ಮಾಡುವುದು, ಶಿಕ್ಷಣ ಇಲಾಖೆ ಮತ್ತು ಸ್ಥಳೀಯ ಸರಕಾರಗಳ ಜವಾಬ್ದಾರಿಯಾಗಿದೆ. ಈ ನಿಟ್ಟಿನಲ್ಲಿ ನಾವೆಲ್ಲಿದ್ದೇವೆ ಎಂಬುದನ್ನು ಅರಿತು, ಮುಂದಿನ ಯೋಜನೆಗಳಲ್ಲಿ ನಮ್ಮ ಗುರಿಯನ್ನು ಸಾಧಿಸಲು ಯೋಚಿಸಬೇಕಾಗಿದೆ.

## ಶಿಕ್ಷಣ ಕ್ಷೇತ್ರದ ನಮ್ಮ ಸವಾಲುಗಳು:

6ರಿಂದ 14ರ ವಯೋಮಾನದ ಪ್ರತೀ ಮಗುವಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ದೊರಕಿಸಿಕೊಡುವಲ್ಲಿ ಕೇಂದ್ರ ಹಾಗೂ ರಾಜ್ಯ ಸರಕಾರಗಳ ಜೊತೆಗೆ ಗ್ರಾಮ ಪಂಚಾಯತಿ, ಶಿಕ್ಷಣ ಇಲಾಖೆ ಹಾಗೂ ಶಾಲಾಭಿವೃದ್ಧಿ ಸಮಿತಿಗಳ ಪಾತ್ರವೂ ಗುರುತರವಾಗಿದೆ. ಪ್ರಸ್ತುತ ನಮ್ಮ ಮುಂದಿರುವ ಸವಾಲುಗಳು ಈ ಕೆಳಗಿನಂತಿವೆ:

- ಗ್ರಾಮ ಪಂಚಾಯತಿ/ ಶಾಲಾ ವ್ಯಾಪ್ತಿಯ 06ರಿಂದ 14ರ ವಯೋಮಾನದ ಎಲ್ಲಾ ಮಕ್ಕಳ ಸಾರ್ವತ್ರಿಕ ದಾಖಲೀಕರಣವನ್ನು ಖಾತರಿಪಡಿಸುವುದು.
- ಶಾಲೆಯಿಂದ ಹೊರಗುಳಿದ ಹಾಗೂ ಶಾಲೆ ಬಿಟ್ಟ 06ರಿಂದ 14ರ ವಯೋಮಾನದ ಮಕ್ಕಳ ಮರುದಾಖಲೀಕರಣ.
- ಶಾಲೆಗೆ ದಾಖಲಾದ ಮಕ್ಕಳು ಮತ್ತೆ ಅರ್ಧದಲ್ಲಿ ಶಾಲೆ ಬಿಡದಂತೆ ನಿಗಾ ವಹಿಸುವುದು.
- ಎಲ್ಲಾ ಮಕ್ಕಳ ಕನಿಷ್ಠ ಕಲಿಕೆಯನ್ನು ಖಚಿತಪಡಿಸುವುದು.
- ಉಚಿತ ಮತ್ತು ಕಡ್ಡಾಯ ಶಿಕ್ಷಣ ಕಾಯ್ದೆಯ ಬಗ್ಗೆ ಗ್ರಾಮಸ್ಥರಿಗೆ ಮಾಹಿತಿ ನೀಡುವುದು ಹಾಗೂ ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಲು ಅವಕಾಶವಂಚಿತ ಮಕ್ಕಳಿಗೆ ಸೂಕ್ತ ಉಚಿತ ಸಹಕಾರ ನೀಡುವುದು.
- ಎಸ್.ಎಸ್.ಎಲ್.ಸಿ. ತೇರ್ಗಡೆ ಹೊಂದಿದ 14ರಿಂದ 18ರ ವಯೋಮಾನದಎಲ್ಲಾ ಮಕ್ಕಳು ಪದವಿಪೂರ್ವ ಕಾಲೇಜು ಅಥವಾ ತಾಂತ್ರಿಕ ತರಬೇತಿ ಕೇಂದ್ರಗಳಲ್ಲಿ ದಾಖಲಾಗುವುದನ್ನು ಖಚಿತಪಡಿಸುವುದು.
- ಯಾವುದೇ ಸ್ಥಳದಲ್ಲಿ ಮಗು ಎಲ್ಲಿ ಬೇಕಾದರೂ ಶಿಕ್ಷಣ ಪಡೆಯಲು ಇರುವ ಅವಕಾಶವನ್ನು ಕಲ್ಪಿಸುವ ಮೂಲಕ ವಲಸೆ ಕಾರ್ಮಿಕರ ಮಕ್ಕಳಿಗೆ ಶಿಕ್ಷಣದ ಸೌಲಭ್ಯವನ್ನು ನೀಡುವುದು.
- ವಿಶೇಷ ಚೇತನ ಮಕ್ಕಳು ಸಾಮಾನ್ಯ ಅಥವಾ ವಿಶೇಷ ಶಾಲೆಗೆ ಕಡ್ಡಾಯವಾಗಿ ದಾಖಲಾಗುವಂತೆ ನಿಗಾ ವಹಿಸುವುದು.
- ಸರಕಾರಿ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಕಂಡುಬಂದಾಗ ಸ್ವಯಂಸೇವಕರ ಸೇವೆಯನ್ನು ಬಳಸಿಕೊಳ್ಳುವ ಮೂಲಕ ಅಥವಾ ದಾನಿಗಳ ನೆರವಿನಿಂದ ಅತಿಥಿ/ ಗೌರವ ಶಿಕ್ಷಕರನ್ನು ಒದಗಿಸಿ ಶಿಕ್ಷಣದ ಗುಣಮಟ್ಟ ಕುಂಠಿತವಾಗದಂತೆ ನೋಡಿಕೊಳ್ಳುವುದು.
- ಶಾಲಾ ಅಭಿವೃದ್ಧಿ ಮತ್ತು ಉಸ್ತುವಾರಿ ಸಮಿತಿಗಳನ್ನು ಸಕ್ರಿಯಗೊಳಿಸುವುದು.

ಈ ಸವಾಲುಗಳನ್ನುಎದುರಿಸಲುಈ ಎಲ್ಲಾ ಘಟಕಗಳಲ್ಲೂ ಶೇಕಡಾ 100ರಷ್ಟು ಪ್ರಗತಿಯನ್ನು ಸಾಧಿಸುವ ಗುರಿ ನಮ್ಮ ಮುಂದಿದೆ. ದೂರದೃಷ್ಟಿ ಯೋಜನೆಯಲ್ಲಿ

ಹಂತ ಹಂತವಾಗಿ ನಮ್ಮ ಗುರಿಯನ್ನು ನಿರ್ಧರಿಸಿಕೊಂಡು ಮುಂದಿನ 5 ವರ್ಷಗಳಲ್ಲಿ ಪ್ರತೀ ಗ್ರಾಮವನ್ನುಸಂಪೂರ್ಣ ಪ್ರಾಥಮಿಕ ಶಿಕ್ಷಣದ ಗುರಿ ಮುಟ್ಟಿಸುವ ಜವಾಬ್ದಾರಿ ಗ್ರಾಮ ಪಂಚಾಯತ್ ಹಾಗೂ ಶಿಕ್ಷಣ ಇಲಾಖೆಯದ್ದಾಗಿದೆ. ಈ ನಿಟ್ಟಿನಲ್ಲಿ ದೂರದೃಷ್ಠಿ ಯೋಜನೆಯಲ್ಲಿ ಶಿಕ್ಷಣಕ್ಕೆ ಸಂಬಂದಿಸಿದ ನಮೂನೆಗಳಲ್ಲಿ ಪೂರಕವಾಗಿರುವ ಮಾಹಿತಿಗಳನ್ನು ಸೇರಿಸಿ ಕಡ್ಡಾಯ ಉಚಿತ ಗುಣಮಟ್ಟದ ಶಿಕ್ಷಣವನ್ನುಒದಗಿಸಲು, ಎಲ್ಲರಿಗೂ ಸಾರ್ವತ್ರಿಕ ಅವಕಾಶ, ದಾಖಲಾತಿ, ಉಳಿಕೆ ಹಾಗೂ ಕಲಿಕೆಗೆ ಅವಕಾಶ ಕಲ್ಪಿಸಿಕೊಡಲು ಸ್ಥಳೀಯ ಸರಕಾರವಾಗಿ ಎಲ್ಲರೂ ಶ್ರಮಿಸೋಣ.

** * * *

ಅನಸಾರಾಗ್ರಾ&ಪಂರಾಸಂ